ನನ್ನನ್ನು ಕೇಳಿದರು, “ ‘Constructive’ ಎಂದರೇನು ಗೊತ್ತೆ?” ನಾನೆಂದೆ, ”ಹ್ಞಂ ಗೊತ್ತು.” “ಇಲ್ಲ, ನೀನು dictionary ಯನ್ನು ನೋಡಿ ಅದರ ಅರ್ಥವನ್ನು ಸರಿಯಾಗಿ ತಿಳಿದುಕೊ.” ಮತ್ತೆ ಮುಂದುವರೆಸಿದರು, “ಈಗ ನೀನು ಎರಡು ಪದಗಳ ಅರ್ಥವನ್ನು ಸರಿಯಾಗಿ ತಿಳಿದಿರುವೆ.” ನಂತರ ಅವರು ಮೂರು ಸಲ ಹೇಳಿದರು – “Be constructive, be constructive, be constructive.” ಸ್ವಾಮಿ ಸದಾನಂದರು ನನ್ನ ಜೀವನದಲ್ಲಿ ಅಪಾರ ಪ್ರಭಾವವನ್ನು ಬೀರಿರುವರು. ಅವರು ಘಂಟೆಗಟ್ಟಲೆ ನನ್ನೊಂದಿಗೆ ಮಾತನಾಡುತ್ತಿದ್ದರು.

“ಸದಾನಂದರು ಬಹಳ ಅಸ್ವಸ್ಥರಾಗಿದ್ದರು. ಡಯಾಬಿಟಿಸ್ ಹಾಗೂ ಬೆರಿಬೆರಿಯಿಂದ ಕಂಗಾಲಾಗಿದ್ದರು. ಬೋಶಿ ಹಾಗೂ ಅವರು ಸೋದರ ಬಾಬು ಹೃತ್ಪೂರ್ವಕವಾಗಿ ಅವರ ಸೇವೆ ಮಾಡಿದರು. ಒಂದು ದಿನ ಯಾವುದೋ ಕಾರಣಕ್ಕೆ ಅಸಮಾಧಾನಗೊಂಡು ಸದಾನಂದರು ಹೇಳಿದರು, ‘ನಿಮ್ಮನ್ನು ಬಿಟ್ಟರೆ ನನಗೆ ಯಾರೂ ಇಲ್ಲವೆಂದು ನೀವು ತಿಳಿದಿರುವಿರಿ. ನನ್ನನ್ನು ರಸ್ತೆಯಲ್ಲಿ ಎಸೆದರೂ ಸ್ವಾಮೀಜಿ ಬಂದು ನನ್ನನ್ನು ಹಿಡಿದೆತ್ತಿ ತಮ್ಮ ಮಡಿಲಲ್ಲಿ ಇರಿಸಿಕೊಳ್ಳುವರು.’ ”

೧೯೧೦ರಲ್ಲಿ ತಾವು ವಿದ್ಯಾರ್ಥಿಯಾಗಿದ್ದಾಗ ಪ್ರಭವಾನಂದರು ಗಿರೀಶ ಘೋಷರನ್ನು ಕಂಡಿದ್ದರು; ಅವರ ಅಭಿನಯವನ್ನೂ ನೋಡಿದ್ದರು. ನಿವೇದಿತಾ ಒಮ್ಮೆ ಸದಾನಂದರನ್ನು ನೋಡಲು ಬಂದಿದ್ದಾಗ ಅವರು ಆಕೆಯನ್ನೂ ನೋಡಿದ್ದರು.

ಪ್ರಭವಾನಂದರು ೧೯೧೧ರಲ್ಲಿ ಬಲರಾಮ ಮಂದಿರದಲ್ಲಿ ಸ್ವಾಮಿ ಬ್ರಹ್ಮಾನಂದರನ್ನು ಭೇಟಿಯಾಗಿದ್ದರು. ಆಗ ಅವರು ಕಲ್ಕತ್ತದ ಸಿಟಿ ಕಾಲೇಜಿನಲ್ಲಿ ಓದುತ್ತಿದ್ದರು. ಅವರು ಆಗಾಗ ಬೇಲೂರು ಮಠಕ್ಕೆ ಹೋಗುತ್ತಿದ್ದರು. ಮಹಾರಾಜರು ಅವರಿಗೆ ಅನೇಕ ಆಧ್ಯಾತ್ಮಿಕ ಉಪದೇಶಗಳನ್ನು ನೀಡುತ್ತಿದ್ದರು. ಅವರು ಸ್ವದೇಶಿ ಆಂದೋಲನದಲ್ಲಿ ಭಾಗವಹಿಸಿದ್ದರು. ಕಾಲೇಜಿನ ಹಾಸ್ಟೆಲ್‌ನಲ್ಲಿ ತಲೆದಿಂಬಿನ ಅಡಿಯಲ್ಲಿ ರಿವಾಲ್ವರ್ ಅಡಗಿಸಿಟ್ಟುಕೊಳ್ಳುತ್ತಿದ್ದರು. ೧೯೧೨ರ ದುರ್ಗಾಪೂಜೆಯ ಸಮಯ ಅವರು ಕಂಖಲ್‌ಗೆ ಹೋಗಿದ್ದರು. ಆಗ ರಾಜಾ ಮಹಾರಾಜರೂ ಕಂಖಲ್‌ನಲ್ಲಿದ್ದರು. ಅಲ್ಲಿ ರಾಜಾ ಮಹಾರಾಜರು ಅವರಿಗೆ ಮಂತ್ರದೀಕ್ಷೆಯನ್ನಿತ್ತರು. ೧೯೧೪ರಲ್ಲಿ ಪ್ರಭವಾನಂದರು ಬಿ.ಎ. ಪಾಸು ಮಾಡಿ, ಆರು ತಿಂಗಳು ಎಂ.ಎ. ಓದಿದ್ದರು. ಆಗ ಅವರು ಬ್ರಜೇಂದ್ರನಾಥ ಸೀಲ್ ಅವರಿಂದ ತತ್ತ್ವಶಾಸ್ತ್ರ ಅಧ್ಯಯನ ಮಾಡುತ್ತಿದ್ದರು. ಬೇಸಿಗೆ ಕಾಲದ ಹಾಗೂ ದುರ್ಗಾಪೂಜೆಯ ರಜೆಯನ್ನು ಅವರು ರಾಜಾ ಮಹಾರಾಜರೊಂದಿಗೆ ಕಳೆಯುತ್ತಿದ್ದರು.

ದೀಕ್ಷಾನಂತರ ಅವರು ಒಮ್ಮೆ ಶ್ರೀಮಾತೆಯವರ ದರ್ಶನಕ್ಕಾಗಿ ಜಯರಾಂಬಾಟಿಗೆ ಹೋದರು. ಇದು ಅವರ ಸ್ಮೃತಿಕಥೆ:

“ನಾನು ಮತ್ತು ನನ್ನ ಸ್ನೇಹಿತ ಅಲ್ಲಿ ತಲುಪಿದಾಗ ಶ್ರೀಮಾತೆಯವರು ನಮಗಾಗಿ ಕಾಯುತ್ತಿರುವರೆಂದೂ, ನಮಗೆ ಅಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಲು ನಿರ್ದೇಶಿಸಿರುವರೆಂದೂ ಅವರ ಸೇವಕರು ನಮಗೆ ಹೇಳಿದರು.

“ನಾವು ಮಧ್ಯಾಹ್ನದ ಭೋಜನವನ್ನು ಮುಗಿಸಿ ಹೋಗಿದ್ದೆವು. ಆದರೆ ನಮಗಾಗಿ ಊಟವನ್ನು ಬೇರೆಯಾಗಿ ಕಾದಿರಿಸಲಾಗಿತ್ತು. ಸಾಲಪತ್ರೆಯಲ್ಲಿ ಊಟವನ್ನು ಬಡಿಸಲಾಯಿತು. ಶ್ರೀಮಾತೆಯವರು ನಮ್ಮ ಹತ್ತಿರದಲ್ಲಿ ಕುಳಿತು ಮಾತನಾಡುತ್ತಿದ್ದರು. ಊಟವಾದ ಬಳಿಕ ನಾವು ಎಲೆಯನ್ನು ತೆಗೆಯಲು ಹೋದಾಗ ಶ್ರೀಮಾತೆಯವರೆಂದರು, ‘ಇದೇನು ಮಾಡುತ್ತಿರುವಿರಿ?’ ನನ್ನ ಸ್ನೇಹಿತ ಬಹಳ ನಾಚಿಕೆಯ ಪ್ರಕೃತಿಯವ. ನಾನೆಂದೆ, ‘ಅಮ್ಮ, ನಮ್ಮ ಎಂಜಲು ಎಲೆಯನ್ನು ತೆಗೆಯುತ್ತಿದ್ದೇವೆ.’ ಶ್ರೀಮಾತೆಯವರೆಂದರು, ‘ಮಗು, ಮನೆಯಲ್ಲಿ ನಿನ್ನ ತಾಯಿ ನಿನ್ನ ಬಳಿ ಕುಳಿತಿದ್ದರೆ, ನೀನು ಎಂಜಲೆಲೆಯನ್ನು ತೆಗೆಯುತ್ತೀಯೇನು?’ ಸಂಗತಿ ಇಲ್ಲಿಗೇ ಮುಗಿಯಿತು. ಅವರೇ ಎಂಜಲು ಎಲೆಗಳನ್ನು ತೆಗೆದು ಜಾಗವನ್ನು ಒರೆಸಿದರು.

“ಶ್ರೀಮಾತೆಯವರ ಒಂದು ವಿಶೇಷತೆಯೆಂದರೆ ಅವರನ್ನು ಕಂಡವರಿಗೆ ಅವರು ತಮ್ಮ ತಾಯಿಯೆಂದೇ ಅನುಭವವಾಗುತ್ತಿತ್ತು. ನನ್ನ ಈ ಭಾವನೆಯ ಬಗ್ಗೆ ಇತರರೊಡನೆ ಹೇಳಿದಾಗ, ಅವರಿಗೂ ಅದೇ ಭಾವನೆಯೆಂದು ತಿಳಿಯಿತು. ಮೊದಮೊದಲು ಅವರ ಆಧ್ಯಾತ್ಮಿಕ ಮಹತ್ವವನ್ನು ತಿಳಿಯದ್ದರಿಂದ ನನ್ನ ತಾಯಿಯಂತೆಯೆ ಆಕೆಯೊಬ್ಬ ಸಹಜ, ಸರಳ, ಸಾಧಾರಣ ಹಳ್ಳಿಯ ಹೆಂಗಸು ಎಂದುಕೊಂಡಿದ್ದೆ. ಜೀವನದ ಪ್ರಾರಂಭದಲ್ಲಿ ಶ್ರೀಮಾತೆಯವರ ಕೃಪೆ ದೊರಕಿದ್ದರಿಂದಲೇ ನಂತರ ಮಹಾರಾಜರ ಕೃಪೆ ಪ್ರಾಪ್ತವಾಯಿತೆಂದು ತಿಳಿಯಿತು.”

೧೯೧೪ರಲ್ಲಿ ಕಾಶಿಯಲ್ಲಿ ಸ್ವಾಮಿ ಪ್ರಭವಾನಂದರು, ಸ್ವಾಮಿ ಪ್ರೇಮಾನಂದ ಹಾಗೂ ಸ್ವಾಮಿ ತುರೀಯಾನಂದರ ನಿಕಟ ಸಂಪರ್ಕಕ್ಕೆ ಬಂದರು. ಅವರು ಅನೇಕ ವೇಳೆ ಠಾಕೂರರ ಶಿಷ್ಯಂದಿರ ನೆನಪುಗಳನ್ನು ಮಾಡಿಕೊಳ್ಳುತ್ತಿದ್ದಂತೆ ತಮ್ಮನ್ನು ತಾವು ಮರೆತುಬಿಡುತ್ತಿದ್ದರು. ಅವರ ಮುಖಮಂಡಲವು ಆನಂದದಿಂದ ಕಂಗೊಳಿಸುತ್ತಿತ್ತು. *(ಮುಂದುವರಿಯುವುದು)*

ಶ್ರೀಕೃಷ್ಣನು ಗೀತೆಯಲ್ಲಿ ವಿರುದ್ಧ ತತ್ತ್ವಗಳ ಮತ್ತು ಪಂಥಗಳ ಸಮನ್ವಯವನ್ನು ಬೋಧಿಸಿರುವುದನ್ನು ಕಾಣಬಹುದು. ನಿಷ್ಕಾಮಕರ್ಮ, ಧ್ಯಾನ, ಜ್ಞಾನ ಹಾಗೂ ಭಕ್ತಿಗಳು ಆಧ್ಯಾತ್ಮಿಕ ಸಾಧನೆಯ ವಿವಿಧ ಅಂಗಗಳು ಎಂಬುದನ್ನು ಅವನು ಮನಗಾಣಿಸಿದ್ದಾನೆ. ಆದರೆ ಅವನು ತನ್ನದೇ ಜೀವನದ ಮೂಲಕ ತೋರಿಸಿಕೊಟ್ಟಿರುವುದು ನಿಷ್ಕಾಮಕರ್ಮವನ್ನು.

— ಸ್ವಾಮಿ ಪ್ರೇಮಾನಂದ

# ಭಕ್ತಿಭಾವಸ್ಫೋಟದ ದೇವೀಸ್ತೋತ್ರರತ್ನ

# 'ಮೂಕಪಂಚಶತೀ'


ಡಾ. ವಾಗೀಶ್ವರೀ ಶಿವರಾಮ

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸ್ತೋತ್ರಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಸಾಧಕನ ಭಕ್ತಿಭಾವವೆಲ್ಲವೂ ಭಗವಂತನ ಕೃಪೆಗಾಗಿ; ಅವನ ಸ್ತುತಿ, ಪ್ರಾರ್ಥನೆಗಳು ಇಹ, ಪರ ಉನ್ನತಿಗಾಗಿ. ಇದಕ್ಕೆ ಉಪಯುಕ್ತವಾದ ವಿಶಿಷ್ಟ ಸ್ತೋತ್ರವೊಂದರ ಪರಿಚಯಾತ್ಮಕ ವಿವರಣೆ ಇಲ್ಲಿದೆ. ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.

ಆದಿ ಶಂಕರಾಚಾರ್ಯರು ರಚಿಸಿದ 'ಸೌಂದರ್ಯಲಹರೀ' ಸ್ತೋತ್ರಕಾವ್ಯವು (೧೦೦ ಶ್ಲೋಕಗಳಿವೆ) ಮಂತ್ರತುಲ್ಯ ಹಾಗೂ ಒಂದೊಂದು ಸ್ತೋತ್ರವೂ ವಿವಿಧ ಫಲಗಳನ್ನು ನೀಡುತ್ತಿವೆಯೆಂದು ಪ್ರಸಿದ್ಧವಾಗಿದೆ. ಅಂತೆಯೇ ಕಾಂಚೀ ಕಾಮಾಕ್ಷೀ ದೇವಿಯ ಕೃಪೆಗೆ ಪಾತ್ರನಾದ ಮೂಕಶಂಕರನ, 'ಮೂಕಪಂಚಶತೀ' ಕಾವ್ಯವೂ ಮಂತ್ರತುಲ್ಯವೆಂಬ ನಂಬಿಕೆಗೆ ಪಾತ್ರವಾಗಿದೆ. ಇದರ ಕೆಲವು ಶ್ಲೋಕಗಳು, ಸೌಂದರ್ಯಲಹರಿಯ ಶ್ಲೋಕಗಳೊಂದಿಗೆ ಸಾಮ್ಯವನ್ನು ಹೊಂದಿವೆ. ದೇವೀಭಕ್ತರಿಗೆ ಪಾರಾಯಣ ಗ್ರಂಥವಾಗಿ, ಅತ್ಯಂತ ಪ್ರಿಯವಾಗಿರುವ ಈ ಕೃತಿ, ವೈದ್ಯಕೀಯ ಕ್ಷೇತ್ರದಲ್ಲೂ ತನ್ನ ಛಾಪನ್ನು ಹೊಂದಿದೆ. ಉಗ್ಗುವಿಕೆ (Stammering) ಮೊದಲಾದ ಮಾತಿನ ದೋಷ, ಓದು-ಬರಹದ ಸಮಸ್ಯೆಗಳು (Dyslexia), ಏಕಾಗ್ರತೆಯ ಕೊರತೆ (ADHD-Attention Deficit Hyper activity Disorder) ಇವುಗಳಿಗೆ ಪಂಚಾಶತಿಯ ಐದು ಶಕ್ತಿಶಾಲಿಯಾದ ಸ್ತೋತ್ರಗಳು *(ಆರ್ಯಾಶತಕ : ಶ್ಲೋ. ೪೮, ೬೨, ೧೦೧, ಕಟಾಕ್ಷ ೧೦೧, ಪಾದಾರವಿಂದ: ೧)* ಪರಿಹಾರ ನೀಡಬಲ್ಲವು ಎಂದು ಪಾಶ್ಚಾತ್ಯ ವೈದ್ಯರಲ್ಲೂ ನಂಬಿಕೆಯಿದೆ.

ಕಾಂಚೀಪುರದ ಪ್ರಸಿದ್ಧ ಜ್ಯೋತಿಷಿಗಳ ಮಗನಾಗಿದ್ದ ಶಂಕರ, ಹುಟ್ಟುವಾಗಲೇ ಕಿವುಡನೂ, ಮೂಕನೂ ಆಗಿದ್ದ. ಬಾಲಕ ಮೂಕ ಶಂಕರ, ಪ್ರತಿನಿತ್ಯ ಬೆಳಿಗ್ಗೆ ಕಾಮಾಕ್ಷೀದೇವಾಲಯಕ್ಕೆ ಹೋಗುತ್ತಿದ್ದ. ದೇವಿಯ ಮುಂದೆ ಕುಳಿತು ಆಕೆಯನ್ನೇ ದಿಟ್ಟಿಸುತ್ತಾ, ಭಾವತುಂಬಿ ಮೌನವಾಗಿ ಪ್ರಾರ್ಥಿಸುತ್ತಿದ್ದ. ದೇವಾಲಯದಲ್ಲಿದ್ದ ಎಲ್ಲರ ಪ್ರೀತಿಗೆ ಪಾತ್ರನೂ ಆದ. ಪ್ರತಿದಿನವೂ ಅರ್ಚಕರು, ಬೆಳಗಿನ ಪೂಜೆ ಮುಗಿಸಿ, ಬಾಲಕನಿಗೆ ಪ್ರಸಾದ ನೀಡಿ ಆಶೀರ್ವದಿಸುತ್ತಿದ್ದರು.

ಒಂದು ದಿನ ಭಕ್ತಿಭಾವ ತುಂಬಿ ದೇವಿಯ ಕಣ್ಣುಗಳನ್ನೇ ಏಕಾಗ್ರತೆಯಿಂದ ದಿಟ್ಟಿಸುತ್ತಿದ್ದ ಬಾಲಕನಿಗೆ, ಆಕೆಯ ತುಟಿಗಳು ಕಂಪಿಸುತ್ತಿರುವಂತೆ ಭಾಸವಾಯಿತು. ಆ ತೀವ್ರವಾದ ಭಕ್ತಿಯ ತುಡಿತದಿಂದ, ಮೂಕತ್ವಕ್ಕೆ ಕಾರಣವಾಗಿದ್ದ ಅಡೆತಡೆ ಸ್ಫೋಟಗೊಂಡಿತು. ದೇವಿಯ ಕರುಣೆಯ ಕೃಪಾಕಟಾಕ್ಷ ಆತನ ಮೇಲೆ ಬಿದ್ದಿತು. ಮೂಕತ್ವ ದೂರವಾಗಿ, ಕವಿತಾಶಕ್ತಿ ಪ್ರವಹಿಸಿತ್ತು. ಕಾಳಿಯ ಕೃಪೆಯಿಂದ, ಕಾವ್ಯಶಕ್ತಿ ಪಡೆದ ಲೋಕಪ್ರಸಿದ್ಧನಾಗಿರುವ ಮಹಾಕವಿ ಕಾಳಿದಾಸ



ನಂತೆ, ಲೋಕವಿಶ್ರುತನಾಗುವ ಭಾಗ್ಯವನ್ನು ಮೂಕಶಂಕರನಿಗೂ ಒದಗಿಬಂದಿತ್ತು. 'ಆತನೊಲಿದರೆ, ಕೊರಡು ಕೊನರುವುದಯ್ಯ' (ಭಗವಂತನ ಕೃಪೆಯಾದರೆ ಒಣಗಿದ ಮರದ ತುಂಡು ಚಿಗುರುವುದು), **'ಕಿಮಲಭ್ಯಂ ಭಗವತೀ ಶ್ರೀನಿಕೇತನೇ ಪ್ರಸನ್ನೇ'** - ಲಕ್ಷ್ಮಿಯನ್ನೇ ವಕ್ಷಸ್ಥಳದಲ್ಲಿ ಧರಿಸಿರುವ ಭಗವಂತನು ಪ್ರಸನ್ನನಾದರೆ, ಎಲ್ಲವೂ ಲಭ್ಯ *(ಶ್ರೀಮದ್ ಭಾಗವತ)* -ಎನ್ನುವ ಮಾತಿನಂತೆ ಚಮತ್ಕಾರವೇ ನಡೆದು ಹೋಯಿತು. ಮೂಕ ಬಾಲಕನ ಬಾಯಿಯಿಂದ, ಉಚ್ಚಕಂಠದಲ್ಲಿ ಪುಂಖಾನುಪುಂಖವಾಗಿ 'ಕಾಮಾಕ್ಷೀ ದೇವಿ' ಯನ್ನು ಸ್ತುತಿಸುವ ಸಂಸ್ಕೃತ ಶ್ಲೋಕಗಳು ಹೊರಹೊಮ್ಮಿದವು.

ದೇವಾಲಯದಲ್ಲಿದ್ದ ಅರ್ಚಕರಾದಿಯಾಗಿ ಎಲ್ಲರ ಕಿವಿಯ ಮೇಲೂ ಆ ಮಧುರವಾದ ಸ್ತೋತ್ರಗಳು ಬಿದ್ದವು. ಅವುಗಳನ್ನು ಕೇಳಿ ರೋಮಾಂಚನಗೊಂಡು, ಮಂತ್ರಮುಗ್ಧರಾದರು. ದೇವಿಯ ಅದ್ಭುತವಾದ ಈ ಪವಾಡವನ್ನು ಕ್ಷಣಕಾಲ ನಂಬಲು ಅಸಾಧ್ಯ ವಾಯಿತು. ಆದರೆ ಮೂಕಶಂಕರನ ಬಾಯಿಯಿಂದ ನಿರರ್ಗಳ ವಾಗಿ ಕಾಮಾಕ್ಷೀದೇವಿ, ಕಾಮಕೋಟಿಪೀಠ, ಏಕಾಮ್ರನಾಥ (ಶಿವ), ಕಾಂಚೀಪುರ ಹಾಗೂ ಕಂಪಾನದಿಯನ್ನು ವರ್ಣಿಸುವ ೫೦೦ಶ್ಲೋಕ ಗಳು ಪ್ರಕಟವಾಗಿದ್ದವು. ಸುದ್ದಿ, ಪೀಠಾಧಿಪತಿಗಳಾಗಿದ್ದ ಸ್ವಾಮಿ ಗಳಿಗೂ ತಲುಪಿತು.

ಈ ಅದ್ಭುತವನ್ನು ಕೇಳಿದ ವಿದ್ಯಾಘನ ಸರಸ್ವತೀ ಸ್ವಾಮಿಗಳೂ, ಬಾಲಕನನ್ನು ಹತ್ತಿರ ಕರೆಸಿ ಆಶೀರ್ವದಿಸಿದರು. ಆತನ ತಂದೆ-ತಾಯಿಗಳನ್ನೂ ಕರೆಸಿ, ಸಮ್ಮತಿ ಪಡೆದು, ಬಾಲಕನಿಗೆ ಸಂನ್ಯಾಸದೀಕ್ಷೆ ನೀಡಿದರು. ಕಾಂಚಿ ಕಾಮಕೋಟಿ ಪೀಠದ ಮುಂದಿನ ಪೀಠಾಧಿ ಪತಿಯನ್ನಾಗಿ ಮಾಡಿದರು. ಅವರೇ 'ಮೂಕಶಂಕರ ಸರಸ್ವತೀಂದ್ರ ಸ್ವಾಮಿ'ಗಳೆಂದು ಪ್ರಸಿದ್ಧರಾದ ೨೦ನೇ ಆಚಾರ್ಯರು (ಕ್ರಿ.ಶ. ೩೯೮-೪೩೭).

### ೧) ದೇವೀಸ್ತೋತ್ರರತ್ನ - ಮೂಕಪಂಚಶತೀ

ಮೂಕಶಂಕರರನು, ಕಾಮಾಕ್ಷಿದೇವಿಯನ್ನು ೫೦೦ ಶ್ಲೋಕ ಗಳಿಂದ ಸ್ತುತಿಸಿರುವ ಸ್ತೋತ್ರಕಾವ್ಯವೇ 'ಮೂಕಪಂಚಶತೀ'. ಇದ ರಲ್ಲಿ ೫ ವಿಭಾಗಗಳಿವೆ. ಮೊದಲಿನ ಆರ್ಯಾಶತಕದಲ್ಲಿ ಕಾಮಾಕ್ಷೀ ದೇವಿ ಹಾಗೂ ಕಂಚೀಪುರದ ವರ್ಣನೆಗಳಿರುವ ೧೦೦ ಶ್ಲೋಕಗಳಿವೆ.

ಎರಡನೆಯ 'ಪಾದಾರವಿಂದಶತಕ'ದಲ್ಲಿ - ದೇವಿಯ ಪಾದ ಗಳನ್ನು ವರ್ಣಿಸುವ ೧೦೦ ಶ್ಲೋಕಗಳಿವೆ. ಮೂರನೆಯ 'ಮಂದ ಸ್ಮಿತಶತಕ'ದಲ್ಲಿ ದೇವಿಯ ಮುಗುಳ್ನಗೆಯನ್ನು ವರ್ಣಿಸುವ ೧೦೦ ಶ್ಲೋಕಗಳಿವೆ. ನಾಲ್ಕನೆಯ 'ಕಟಾಕ್ಷಶತಕ'ದಲ್ಲಿ, ದೇವಿಯ ಕರುಣೆ ಬೀರುವ ಕಡೆಗಣ್ಣಿನ ನೋಟವನ್ನು ವರ್ಣಿಸಿರುವ ೧೦೦ ಶ್ಲೋಕ ಗಳಿವೆ. ಐದನೆಯ 'ಸ್ತುತಿಶತಕ'ದಲ್ಲಿ ದೇವಿಯನ್ನು ಭಾವತುಂಬಿ ಸ್ತುತಿಸಿರುವ ೧೦೦ ಶ್ಲೋಕಗಳಿವೆ.

### ೨)ಆರ್ಯಾಶತಕದಲ್ಲಿ ಅಭಿವ್ಯಕ್ತಗೊಂಡಿರುವ ಭಕ್ತಿಭಾವದ ಹೊನಲು

ಸಾಕ್ಷಾತ್ ಕಾಮಾಕ್ಷಿಯೇ ತನ್ನ ಭಕ್ತನ ಅಂತರಂಗವನ್ನು ಪ್ರವೇ ಶಿಸಿ, ಆತನನ್ನು ತನ್ನ ಉಪಕರಣವನ್ನಾಗಿ ಮಾಡಿಕೊಂಡು, ಭಕ್ತರ ಉದ್ಧಾರಕ್ಕಾಗಿ ಈ ಸ್ತೋತ್ರಗಳನ್ನು ಪ್ರಕಟಪಡಿಸಿದ್ದಾಳೆ. ಸಾಧಕ ಭಕ್ತರಿಗೆ ಮಾರ್ಗದರ್ಶನ ನೀಡುವ ಹಲವು ವಿಚಾರಗಳು; ಧ್ಯಾನಕ್ಕೆ ಯೋಗ್ಯವಾದ ಸುಂದರರೂಪದ ದೇವಿಯ ಸಾಕಾರರೂಪ; ನಿರ್ಗುಣ ರೂಪದ ವರ್ಣನೆಗಳ್ಹೆ ಇಲ್ಲಿವೆ. ಸ್ತೋತ್ರದ ಆರಂಭದಲ್ಲಿಯೇ 'ದೇವಿಯ ಸುಂದರರೂಪ'ವನ್ನು ಕಣ್ಣೆದುರಿಗೆ ತಂದು ನಿಲ್ಲಿಸಿರುವ ವರ್ಣನೆಗಳು ಹೀಗಿವೆ:

**ಕಾರಣಪರಚಿದ್ರೂಪಾ ಕಾಂಚೀಪುರಸೀಮ್ನಿ ಕಾಮಪೀಠಗತಾ ।**
**ಕಾಚನ ವಿಹರತಿ ಕರುಣಾ ಕಾಶ್ಮೀರಸ್ತಬಕ ಕೋಮಲಾಂಗಲತಾ ॥ ೧ ॥**

''ಸಕಲ ಕಾರಣಳೂ, ಜ್ಞಾನಸ್ವರೂಪಳೂ, ಕಂಚಿಯ ಕಾಮ ಪೀಠದಲ್ಲಿ ಆಸೀನಳಾಗಿರುವವಳೂ, ಕೇಸರಿಯ ಗೊಂಚಲಿನಂತೆ, ಕೋಮಲವಾದ ಅಂಗಾಂಗವುಳ್ಳ, ಕರುಣಾರ್ದ್ರಹೃದಯಳೂ ಆದ ಕಾಮಾಕ್ಷಿದೇವಿಯು ಶೋಭಿಸುತ್ತಿದ್ದಾಳೆ.''

ಆಧ್ಯಾತ್ಮಿಕ ಅನುಭಾವಿಗಳ ಸಾಕಾರ ವರ್ಣನೆಯಲ್ಲಿ, ನಿರ್ಗುಣ -ನಿರಾಕಾರ ಪರಬ್ರಹ್ಮನ ತತ್ತ್ವವೂ ಅಡಗಿರುವುದನ್ನು ಗಮನಿಸ ಬೇಕು. ಪರಬ್ರಹ್ಮನು 'ಸತ್-ಚಿತ್-ಆನಂದಸ್ವರೂಪನು' ಎಂದು ಉಪನಿಷತ್ತುಗಳು ತಿಳಿಸುತ್ತವೆ. ಹಾಗೆಯೇ ಈ ಸ್ತೋತ್ರದಲ್ಲೂ ದೇವಿ ಸರ್ವವ್ಯಾಪಕಳು, ಜ್ಞಾನಸ್ವರೂಪಳು ಎಂದು ಕವಿ ವರ್ಣಿಸಿದ್ದಾನೆ.

'ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ' - 'ಎಲ್ಲರಿಗೂ ಉಪಕಾರಮಾಡಲು, ದೇವಿಯ ಹೃದಯ ಕರುಣೆಯಿಂದ ತುಂಬಿ ಕೊಂಡು ಯಾವಾಗಲೂ ಆರ್ದ್ರವಾಗಿರುತ್ತದೆ' ಎಂದು ಮಾರ್ಕಂ ಡೇಯ ಮುನಿಗಳು 'ದುರ್ಗಾಸಪ್ತಶತೀ'ಯಲ್ಲಿ ವರ್ಣಿಸಿದ್ದಾರೆ. ಈ ಪಂಚಶತಿಯಲ್ಲಿ ಶಂಕರಕವಿ, ದೇವಿಯು ''ಕರುಣೆಯಿಂದ ತುಂಬಿ ದವಳು'' ಎಂದು ವರ್ಣಿಸಿದ್ದಾನೆ. ''ದೇವಿಯ ಕಡೆಗೆ ಒಂದು ಹೆಜ್ಜೆ ಇಟ್ಟರೆ, ಆಕೆಯೇ ೧೦ ಹೆಜ್ಜೆ ಮುಂದಿಟ್ಟು ಭಕ್ತನನ್ನು ಎತ್ತಿಕೊಳ್ಳು ತ್ತಾಳೆ'' ಎಂಬ ರಾಮಕೃಷ್ಣಪರಮಹಂಸರ ಮಾತನ್ನು ಇಲ್ಲಿ ಸ್ಮರಿಸಿ ಕೊಳ್ಳಬೇಕು.

**ಚಿಂತಿತಫಲಪರಿಪೋಷಣಚಿಂತಾಮಣಿರೇವ ಕಾಂಚಿನಿಲಯಾ ಮೇ ।**
**ಚಿರತರಸುಚರಿತ ಸುಲಭಾ ಚಿತ್ತಂ ಶಿಶಿರಯತು ಚಿತ್‌ಸುಖಾಧಾರಾ ॥**

''ನಮ್ಮೆಲ್ಲರಿಗೆ ಕಂಚಿಯಲ್ಲಿರುವ ಕಾಮಾಕ್ಷಿದೇವಿಯು, ಇಷ್ಟಾರ್ಥ ಗಳನ್ನು ಪೂರ್ತಿಮಾಡುವ ಚಿಂತಾಮಣಿಯೇ ಆಗಿರುವಳು. ಒಳ್ಳೆಯ ಗುಣ-ನಡತೆಗಳಿಂದ ಸುಲಭವಾಗಿ ಲಭ್ಯಳು. ಜ್ಞಾನಾಮೃತ ಧಾರೆಯಿಂದ ದೇವಿಯು ನನ್ನ ಮನಸ್ಸನ್ನು ಶಾಂತಗೊಳಿಸಲಿ.''

ಭಕ್ತನಿಗೆ ಭಗವಂತ 'ಕಾಮಧೇನು'-ಬಯಸಿದ್ದನ್ನು ಕೊಡುವ ಸ್ವರ್ಗಲೋಕದ ಸುರಭಿ, ಕಲ್ಪವೃಕ್ಷ-ಕಲ್ಪಿಸಿಕೊಂಡಿದ್ದನ್ನು ಕೂಡಲೇ ನೀಡುವನು, ಚಿಂತಾಮಣಿ-ಚಿಂತಿಸಿದ್ದನ್ನೆಲ್ಲ ಈಡೇರಿಸುವನು. ದೇವಿಯು 'ಸದಾಚಾರ ಪ್ರವರ್ತಿನೀ'(ಲಲಿತಾ ಸಹಸ್ರನಾಮ) 'ಒಳ್ಳೆಯ ಆಚಾರ-ವಿಚಾರಗಳಲ್ಲಿ ನಡೆಯುವಂತೆ ಪ್ರೇರೇಪಿಸು ವವಳು.' ಸದಾಚಾರ, ಸದ್ಗುಣಗಳಿಂದಲೇ ದೇವಿ ಸುಲಭವಾಗಿ ಲಭ್ಯಳು. ಕೇವಲ ಜಡವಾದ ಆಡಂಬರದ ಬಾಹ್ಯಪೂಜೆಗಳಿಂದ ಆಕೆಯನ್ನು ಒಲಿಸಿಕೊಳ್ಳುವುದು ಸುಲಭವಲ್ಲ. ಸಮ್ಯಕ್‌ಜ್ಞಾನದಿಂದ ಉಂಟಾದ ಸಮ್ಯಕ್‌ದೃಷ್ಟಿಯಿಂದಲೇ ಮನಸ್ಸಿನ ಸುಖ-ಶಾಂತಿ ಲಭಿಸುತ್ತದೆ - ಇತ್ಯಾದಿ ವಿಚಾರಗಳು ಈ ಶ್ಲೋಕದ ಅರ್ಥಚಿಂತನೆ ಯಿಂದ ಮನಃಪಟಲದಲ್ಲಿ ಸ್ಫುರಿಸುತ್ತವೆ.

ಬಿಳಿಯ ಬಣ್ಣದ ದೇವಿಯು: 'ಒಳಗೂ-ಹೊರಗೂ ಪರಿಶುದ್ಧ ರಾಗಿರಿ' ಎಂದು ತಿಳಿಸುತ್ತಿದ್ದಾಳೆ. 'ಹಸನ್ಮುಖಿ ಸದಾ ಸುಖೀ'' ಎನ್ನುವುದನ್ನು ''ಮಂದಸ್ಮಿತ ಪ್ರಭಾಪೂರ- ಮಜ್ಜತ್- ಬ್ರಹ್ಮಾಂಡ ಮಂಡಲಾ''- ತನ್ನ ಮುಗುಳ್ನಗೆಯ ಪ್ರಭೆಯಲ್ಲಿ, ದೇವಿಯು ಬ್ರಹ್ಮಾಂಡ ಮಂಡಲವನ್ನೇ ಮುಳುಗಿಸಿದ್ದಾಳೆ ಎಂದು ಲಲಿತಾ